603 (983) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) : ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೊಸ ಪಡಿತರ ಚೀಟಿ ನೀಡುವ ಸಂಬಂಧ ಸರ್ವೆ ಪ್ರಕಾರ ಯಾವ ಯಾವ ವರ್ಗದ ಎಷ್ಟೆಷ್ಟು ಪಡಿತರದಾರರನ್ನು ರಾಜ್ಯಾದ್ಯಂತ ಗುರುತಿಸಲಾಗಿದೆ;

ಆ) ಇವರುಗಳಿಗೆ ಫೋಟೋ ಸಹಿತ ಕುಟುಂಬ ಪಡಿತರ ಚೀಟಿ ನೀಡುವ ವಿಚಾರದಲ್ಲಿ ಈವರೆಗೆ ಏನೇನು ಕ್ರಮ ಕೈಗೊಳ್ಳಲಾಗಿದೆ;

ಇ) ಗುರುತು ಮಾಡಿರುವ ಎಲ್ಲರಿಗೂ ಪಡಿತರ ಚೀಟಿ ನೀಡಲು ಎಷ್ಟು ಸಮಯ ನಿಗದಿ ಮಾಡಲಾಗಿದೆ;

ಈ) ಸರ್ವೇ ಮಾಡುವ ಸಂದರ್ಭದಲ್ಲಿ ಸ್ಥಳದಲ್ಲಿ ಇಲ್ಲದ ಕುಟುಂಬಗಳು ಕೈಬಿಟ್ಟು ಹೋಗಿದ್ದು, ಅಂತಹ ಕುಟುಂಬ ವರ್ಗದವರು ಪಡಿತರ ಚೀಟಿ ಹೊಂದಲು ಇರುವ ನಿಯಮಗಳೇನು?

ಶ್ರೀ ಗೋವಿಂದ ಎಂ. ಕಾರಜೋಳ (ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು) :

ಅ) ರಾಜ್ಯದಾದ್ಯಂತ ಸರ್ವೇ ಕಾರ್ಯದಲ್ಲಿ ಗುರುತಿಸಿರುವ ವರ್ಗವಾರು ಪಡಿತರ ಚೀಟಿದಾರರ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಆ) ಫೋಟೋ ಸಹಿತ ಕುಟುಂಬ ಪಡಿತರ ಚೀಟಿ ನೀಡಲು ತಾತ್ಕಾಲಿಕ ಪಡಿತರ ಕೂಪನ್‌ಗಳ ವಿತರಣೆ ಕಾರ್ಯ ಪ್ರಾರಂಭಿಸಲಾಗಿದೆ. ಆನಂತರ ಅವರ ಭಾವಚಿತ್ರ ಮತ್ತು ಹೆಬ್ಬೆಟ್ಟಿನ ಗುರುತನ್ನು ಅವರವರ ಗ್ರಾಮದಲ್ಲಿ ಸೆರೆಹಿಡಿದು ಗಣಕೀಕೃತ ಪಡಿತರ ಚೀಟಿ ವಿತರಿಸಲು ಕ್ರಮವಹಿಸಲಾಗುವುದು.

ಇ) ಮನೆ ಮನೆ ಸಮೀಕ್ಷೆ ವೇಳೆ ಗುರುತಿಸಲಾದ ಎಲ್ಲಾ ಫಲಾನುಭವಿಗಳಿಗೂ ದಿನಾಂಕ: 15–7–2005ರ ಒಳಗಾಗಿ ತಾತ್ಕಾಲಿಕ ಪಡಿತರ ಕೂಪನ್‌ಗಳನ್ನು ವಿತರಿಸಿ ನಂತರ 15–11–2006ರ ಒಳಗಾಗಿ ಗಣಕೀಕೃತ ಪಡಿತರ ಚೀಟಿಗಳನ್ನು ವಿತರಿಸಲಾಗುವುದು.

ಈ) ಸರ್ಕಾರದ ಕಾರ್ಯಕ್ರಮದ ಪ್ರಕಾರ ಸಮೀಕ್ಷೆ ವೇಳೆ ಗುರುತಿಸಲಾಗಿರುವ ಎಲ್ಲಾ ಫಲಾನುಭವಿಗಳಿಗೆ ತಾತ್ಕಾಲಿಕ ಗಣಕೀಕೃತ ಕೂಪನ್‌ಗಳನ್ನು ದಿನಾಂಕ: 15–7–2006ರ ಒಳಗಾಗಿ ವಿತರಿಸಲು ಯೋಜನೆಯನ್ನು ರೂಪಿಸಲಾಗಿದೆ. ಈ ಸಂದರ್ಭದಲ್ಲಿ ಮನೆ ಮನೆ ಸಮೀಕ್ಷೆಯ ವೇಳೆ ಕೈಬಿಟ್ಟು ಹೋಗಿರುವ ಕುಟುಂಬಗಳನ್ನು ಗುರುತಿಸಲು ಸಾರ್ವಜನಿಕ ಕುಂದು ಕೊರತೆ ವಿಭಾಗವನ್ನು ತೆರೆಯಲಾಗಿರುತ್ತದೆ. ಪಾಲುದಾರ ಸಂಸ್ಥೆಯ ಪ್ರತಿನಿಧಿಯು ತಾಲ್ಲೂಕು ಕಛೇರಿಯಲ್ಲಿ ಈ ಬಗ್ಗೆ ಸಾರ್ವಜನಿಕ ಅಹವಾಲುಗಳನ್ನು ನೊಂದಾಯಿಸಿಕೊಳ್ಳುವರು. ಮನವಿದಾರರು 1–00 ರೂ. ಶುಲ್ಕವನ್ನು ಪಾವತಿಸಿ ತಮ್ಮ ಅಹವಾಲನ್ನು ನೊಂದಾಯಿಸಿ ಸ್ವೀಕೃತಿಯನ್ನು ಪಡೆಯಲು

ಸೂಚಿಸಲಾಗಿರುತ್ತದೆ. ಇದಕ್ಕಾಗಿ 15 ದಿನಗಳ ಕಾಲಾವಕಾಶವನ್ನು ನೀಡಲಾಗಿದ್ದು ಸದರಿ ಸಂದರ್ಭದಲ್ಲಿ ಸ್ವೀಕೃತವಾದ ಎಲ್ಲಾ ಅಹವಾಲುಗಳನ್ನು ಪರಿಶೀಲನೆಗೆ ಒಳಪಡಿಸಿ ಅರ್ಹ ಫಲಾನುಭವಿಗಳಿಗೆ ಪಡಿತರ ಚೀಟಿಯನ್ನು ವಿತರಿಸಲು ಕ್ರಮವಹಿಸಲಾಗುವುದು.

Annexure

Sl. No.	Name of the District	Number of families identified				
		Annapurna	AAY	BPL	APL	Total
1	2	3	4	5	6	7
1.	ಬಾಗಲಕೋಟೆ	1831	47660	166840	163117	379448
2	ಬೆಂಗಳೂರು ಅಪ	0	18769	200961	760156	979888
3	ಬೆಂಗಳೂರು (ಗ್ರಾ)	3164	35729	238623	197886	475402
4	ಬೆಂಗಳೂರು (ನ)	861	15898	139506	201776	358041
5	ಬೆಳಗಾಂ	2706	96677	448497	420005	967868
6	ಬಳ್ಳಾರಿ	0	66486	170194	211878	448368
7	ಬೀದರ್	2004	45175	137097	135312	319589
8	ಬಿಜಾಪುರ	658	56556	165181	162899	385294
9	ಚಾಮರಾಜನಗರ	1624	36075	135792	68817	242308
10	ಚಿಕ್ಕಮಗಳೂರು	727	23537	134097	118308	276669
11	ಚಿತ್ರದುರ್ಗ	0	47378	180544	132870	360792
12	ದಕ್ಷಿಣ ಕನ್ನಡ	351	15881	35324	216543	368599
13	ದಾವಣಗೆರೆ	0	53933	176309	192878	423120
14	ಧಾರವಾಡ	1452	32809	165484	171374	371119
15	ಗದಗ್	37	31737	88063	96107	215944
16	ಗುಲ್ಬರ್ಗಾ	2698	104530	295210	298893	701331
17	ಹಾಸನ	0	25098	2702115	139310	434522
18	ಹಾವೇರಿ	1864	50536	117296	128450	298148
19	ಕೊಡಗು	485	6128	78474	60784	145871
20	ಕೋಲಾರ	4373	65916	300289	245846	616424
21	ಕೊಪ್ಪಳ	210	42062	92597	119285	254154
22	ಮಂಡ್ಯ	333	37209	238907	179160	455609

1	2	3	4	5	6	7
23	ಮೈಸೂರು	2782	51104	329791	305688	689365
24	ರಾಯಚೂರು	2343	60279	127551	173800	363973
25	ಶಿವಮೊಗ್ಗ	1631	41463	159282	182950	385326
26	ತುಮಕೂರು	2907	56307	312768	206122	578104
27	ಉಡುಪಿ	459	17872	87897	114563	220791
28	ಉತ್ತರ ಕನ್ನಡ	644	6895	151509	131134	30018
	ಒಟ್ಟು	**36644**	**1199700**	**5244198**	**5535911**	**12016483**

606 (987) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) : ಮಾನ್ಯ ಮೀನುಗಾರಿಕೆ ಹಾಗೂ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಾದ್ಯಂತ ಮೀನುಗಾರಿಕೆ ಅವಲಂಬಿಸಿರುವವರ ಸಂಖ್ಯೆ ಎಷ್ಟು; (ವಿವರ ನೀಡುವುದು);

ಆ) ಮೀನುಗಾರಿಕೆ ಪ್ರೋತ್ಸಾಹಕ್ಕಾಗಿ ಸರ್ಕಾರ ರೂಪಿಸಿರುವ ಕಾರ್ಯಕ್ರಮಗಳೇನು; (ವಿವರ ನೀಡುವುದು);

ಇ) ಮೀನುಗಾರಿಕೆಯನ್ನು ಹೆಚ್ಚಿನ ರೀತಿಯಲ್ಲಿ ಪ್ರೋತ್ಸಾಹಿಸಿ ಜನಪ್ರಿಯಗೊಳಿಸಲು ಸರ್ಕಾರ ಯಾವ ರೀತಿಯ ಯೋಜನೆಗಳನ್ನು ರೂಪಿಸಿದೆ?

ಶ್ರೀ ಬಿ. ನಾಗರಾಜಶೆಟ್ಟಿ (ಮೀನುಗಾರಿಕೆ ಹಾಗೂ ಮುಜರಾಯಿ ಸಚಿವರು) :

ಅ) ರಾಜ್ಯದಾದ್ಯಂತ 2.10 ಲಕ್ಷ ಮೀನುಗಾರರು ಮೀನುಗಾರಿಕೆಯನ್ನು ಅವಲಂಬಿಸಿದ್ದಾರೆ. ಈ ಪೈಕಿ 0.97 ಲಕ್ಷ ಕರಾವಳಿ ಮೀನುಗಾರರು ಮತ್ತು 1.13 ಲಕ್ಷ ಒಳನಾಡು ಮೀನುಗಾರರು ಇರುತ್ತಾರೆ.

ಆ) ಮೀನುಗಾರಿಕೆಯ ಪ್ರೋತ್ಸಾಹಕ್ಕಾಗಿ ಮೀನುಗಾರಿಕೆ ಇಲಾಖೆಯಿಂದ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

1. **ಕರಾವಳಿ ಮೀನುಗಾರಿಕೆ:**
   - > ಯಾಂತ್ರೀಕೃತ ದೋಣಿಗಳು ಬಳಸುವ 70,000 ಕಿ.ಲೀ. ರಾಜ್ಯ ಮಾರಾಟಕರ ರಹಿತ ಡೀಸಲ್ ಸರಬರಾಜು;
   - > ಕೇಂದ್ರ ವಲಯ ಯಾಂತ್ರೀಕೃತ ಮೀನುಗಾರಿಕಾ ದೋಣಿಗಳು ಉಪಯೋಗಿಸುವ ಇಂಧನದ ಮೇಲೆ ಕೇಂದ್ರ ಅಬ್ಕಾರಿ ಶುಲ್ಕ ರಿಯಾಯಿತಿ;